**ಸಮಾಜವಾದದ ಕಳ್ಳುಬಳ್ಳಿ ಸಂಬಂಧವನ್ನು ಪಸರಿಸುತ್ತಾ ನಾಡಿನಲ್ಲೆಲ್ಲ ಸಂಚರಿಸಿದ್ದ ಶಾಂತವೇರಿ ಗೋಪಾಲಗೌಡರು, ಕರ್ನಾಟಕ ರಾಜಕಾರಣಕ್ಕೆ ಸಾಂಸ್ಕೃತಿಕ ಪ್ರಭೆಯನ್ನು ತಂದುಕೊಟ್ಟವರು; ಲೋಹಿಯಾ ಸಖ್ಯವನ್ನು ಕನ್ನಡ ನೆಲಕ್ಕೆ ಕಸಿ ಮಾಡಿದವರು. ಜನ್ಮ ಶತಮಾನೋತ್ಸವ ವರ್ಷದಲ್ಲಿ, ಗೋಪಾಲಗೌಡರ ವ್ಯಕ್ತಿತ್ವದ ಅಷ್ಟೇನೂ ಪರಿಚಿತವಲ್ಲದ ಆಯಾಮದ ಆಪ್ತನೆನಪು.**

1

**ಕಾಲ** ತನ್ನ ಪಾಡಿಗೆ ತಾನು ಮುನ್ನಡೆಯುತ್ತಲೇ ಇರುತ್ತದೆ. ನಮ್ಮನ್ನು ರೂಪಿಸಿದ ಬದುಕನ್ನು, ಆಗಿನ ಸಂಬಂಧಗಳನ್ನು ನೆನಪಿಸಿಕೊಳ್ಳುವ ಮೂಲಕ ನಾವು ಕಾಲದಿಂದ ಕಲಿಯುವುದು ಬಹಳವಿದೆ. ಶಾಂತವೇರಿ ಗೋಪಾಲಗೌಡರು ಸಮಸ್ತ ಕರ್ನಾಟಕದ ಜೀವನಾಡಿಯಂತೆ ನಾಡಿನ ತುಂಬ ಸುತ್ತಾಡಿದ್ದರು. ರಾಮಮನೋಹರ್ ಲೋಹಿಯಾ ಅವರನ್ನು ಕನ್ನಡದ ನೆಲಕ್ಕೆ ಕರೆತಂದು, ಸಮಾಜವಾದೀ ಚಿಂತನೆಯ ಹೊಸ ಹಾದಿಯನ್ನು ನಮ್ಮವರಿಗೆ ತೋರಿಸಿದ್ದರು. ಕಾಗೋಡಿನ ರೈತರ ಸತ್ಯಾಗ್ರಹದ ರೂವಾರಿಯಾಗಿದ್ದರು. ನಾಡು ಕಂಡ ಅಪರೂಪದ ಸಜ್ಜನ ರಾಜಕಾರಣಿಯಾಗಿದ್ದ ಗೋಪಾಲಗೌಡರನ್ನು ಕಂಡವರು, ಒಡನಾಡಿದವರು ಅವರ ಸರಳತೆ, ಸಜ್ಜನಿಕೆ, ವೈಚಾರಿಕತೆ, ಹೋರಾಟದ ಬದುಕನ್ನು ಕುರಿತು ತಾವು ಕಂಡದ್ದನ್ನು, ತಮಗೆ ಅನಿಸಿದ್ದನ್ನು ನೆನೆದು ಬರೆದರೆ ಅದು ಸಹ ಶ್ರದ್ಧೆಯ, ಕೃತಜ್ಞತೆಯ ಹೂವಾಗಿ ಅವರಿಗೆ ಸಲ್ಲುತ್ತದೆ. ಈ ವರ್ಷ ಗೋಪಾಲಗೌಡರ ಜನ್ಮಶತಮಾನೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಅವರ ಕೆಲವು ನೆನಪುಗಳನ್ನು ಹೇಳುವುದು ಕನ್ನಡದ ಸಾಂಸ್ಕೃತಿಕ ಧರ್ಮ.

ನಾನು ಗೋಪಾಲಗೌಡರ ಜೀವನ ಚರಿತ್ರೆಯನ್ನು ಹೇಳುವುದಿಲ್ಲ. ಅದನ್ನು ಈಗಾಗಲೇ ಕೆಲವು ಮಿತ್ರರು ಪೂರೈಸಿದ್ದಾರೆ. ಮುಖ್ಯವಾಗಿ ಡಾ. ಎಚ್. ಸಿ. ವಿಷ್ಣುಮೂರ್ತಿ, ದೇವಂಗಿ ಟಿ. ಚಂದ್ರಶೇಖರ್, ಕೋಣಂದೂರು ಲಿಂಗಪ್ಪ, ವೆಂಕಪ್ಪಗೌಡ ಮುಂತಾದವರ ಬರಹಗಳಲ್ಲಿ ಗೌಡರ ಜೀವನದ ಮಹತ್ವದ ಅಂಶಗಳು ದಾಖಲಾಗಿವೆ. ಆದರೆ ಬಹಳ ಜನರಿಗೆ ಗೊತ್ತಿರದ, ಗೌಡರ ಜೀವನದ ಕೆಲವು ಸಂಗತಿಗಳನ್ನು ಇಲ್ಲಿ ಹೇಳಬಯಸುತ್ತೇನೆ.

ಗೋಪಾಲಗೌಡರ ಬಗ್ಗೆ ಆಗಾಗ ಪತ್ರಿಕೆಗಳಲ್ಲಿ ಓದುತ್ತಿದ್ದೆ. ನೇರವಾಗಿ ಯಾವುದೇ ಪಂಥ, ಸಿದ್ಧಾಂತ, ರಾಜಕೀಯ ಕಾರ್ಯಕ್ರಮ ಮುಂತಾದವುಗಳ ಬಗ್ಗೆ ಆಸಕ್ತಿ ಇಟ್ಟುಕೊಂಡಿರದಿದ್ದ ನಾನು, ಗೋಪಾಲಗೌಡರು ಧಾರವಾಡಕ್ಕೆ ಬರುತ್ತಿದ್ದ ಬಗ್ಗೆ, ಇಲ್ಲಿಯ ಡಿ.ಎಲ್. ಪಾಟೀಲ ಎಂಬ ವಕೀಲರ ಜೊತೆಗೆ ನಮ್ಮಲ್ಲಿ ಸಮಾಜವಾದೀ ಬಳಗವನ್ನು ಕಟ್ಟುತ್ತಿದ್ದ ಬಗ್ಗೆ ಚರ್ಚಿಸಿದ ಸುದ್ದಿಗಳನ್ನು ಓದುತ್ತಿದ್ದೆ. ನಮಗಿಂತ ಸ್ವಲ್ಪ ಹಿರಿಯರಾಗಿದ್ದ ನೀಲಗಂಗಯ್ಯ ಪೂಜಾರ ವಕೀಲರು, ಮೊರಬದ ರಾಚಪ್ಪ ಬೆಟಸೂರ, ಕಲ್ಲಣ್ಣವರ ವಕೀಲರು, ಪದಕಿ ವಕೀಲರು ಮುಂತಾದವರ ಜೊತೆ ಇರುತ್ತಿದ್ದ ಬಗ್ಗೆ ತಿಳಿಯುತ್ತಿತ್ತು. ಮೊದಲು ಲೈನ್ ಬಜಾರದಲ್ಲಿದ್ದ ಪಾಟೀಲ ವಕೀಲರು ನಂತರದ ದಿನಗಳಲ್ಲಿ ನಗರಸಭೆಯವರು ಅಲಾಟ್ ಮಾಡಿದ್ದ, ರಾಮನಗರದ ಮನೆಗೆ ಬಂದಿದ್ದರು. ನಾನು ಅವರನ್ನು ನೋಡಿದ್ದು ಆ ಮನೆಯಲ್ಲಿಯೇ. ನಂತರದ ದಿನಗಳಲ್ಲಿ ಪಾಟೀಲರ ಮಗ, ವಿ.ಡಿ. ಪಾಟೀಲರು ನನ್ನ ಸಹೋದ್ಯೋಗಿಯಾಗಿದ್ದರು. 'ಕವಿವಿ'ಯಲ್ಲಿ ಪ್ರೊಫೆಸರ್ ಆಗಿದ್ದ ಪಾಟೀಲರು ನಾನು ಕಂಡ ಅಪರೂಪದ ಸಜ್ಜನರು, ಗಣಿತ ವಿದ್ವಾಂಸರು. ನನಗಿದ್ದ ಗೋಪಾಲಗೌಡರ ಸಂಪರ್ಕವನ್ನು ಅರಿತ ನಂತರ ಎರಡು ಮೂರು ಸಲ ನನ್ನ ಮನೆಗೂ ಬಂದು ಹೋಗಿದ್ದರು.

ಈ ಮಧ್ಯೆ, ಗೋಪಾಲಗೌಡರ ಮದುವೆ ಪ್ರಸಿದ್ಧ